Madam Speaker.—I have heard Hon. Leader of Opposition and other members on the two questions of privilege. I have also heard the Minister for Transport. Several arguments were advanced regarding the powers of the Government in the affairs of the Road Transport Corporation etc. There are a number of rulings of Parliament, other State Legislatures and of this House that if any statement is made by any member of Minister which another member believes to be untrue, incomplete or incorrect, then there is no breach of privilege. The established procedure in such cases is to hear both the members and the Minister concerned and the matter is left to the members of the House and the public to judge who is right or who is not right. The Speaker of Lok Sabha has held that we cannot enter into any enquiry or investigation here. The recent rulings of Lok Sabha in such cases are also to the effect that there can be no question of privilege when facts are in dispute. A breach of privilege can arise only when the member or the Minister makes a false statement or an incorrect statement wilfully, deliberately and knowingly.

In the light of the rulings on the above lines, to-day I allowed the members and the Minister to make their statements. Both the versions are before the House. I withhold my consent to the privilege motion. This does not however mean that the matter cannot be raised by members in other ways. The House can discuss the affairs of the Corporation through other Parliamentary devices. I may also add that the Public Undertakings Committee also goes into the working of the Corporation.

So far as the privilege matter is concerned, I feel that the matter may be treated as closed.

Now, we will go to next item.

NON OFFICIAL RESOLUTION

re : Construction of a statutory Malnad Development Board (Debate Contd.)

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ನಾನು ಹಿಂದೆ ಇದೇ ಸಭೆಯಲ್ಲಿ ಮಾತನಾಡುತ್ತಿದ್ದುದು, ಮಲೆನಾಡು ಅಭಿವೃದ್ಧಿ ಮಂಡಲಿಯ ಸ್ಥಾಪನೆಯ ಬಗ್ಗೆ ಮಾತನಾಡುತ್ತಿದ್ದೆ. ಅದನ್ನೇ ನಾನೀಗ ಮುಂದುವರಿಸುತ್ತ ಆ ಮಲೆನಾಡಿನ ವಿಸ್ತೀರ್ಣವೆಷ್ಟೆಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ನಮ್ಮ ರಾಜ್ಯದ ಇಡೀ ವಿಸ್ತೀರ್ಣ ೮೦ ಸಾವಿರ ಚದುರ ಮೈಲ್ಗಿಳು. ಅದರಲ್ಲಿ ನಮ್ಮ ಮಲೆನಾಡಿನ ವಿಸ್ತೀರ್ಣ ೩೦ ಸಾವಿರ ಚದುರ ಮೈಲು ಇದೆ. ಅಲ್ಲಿಯ ಜನಸಂಖ್ಯೆ ೬೦ ಲಕ್ಷ ಆಗುತ್ತದೆ. ಈ ಮಲೆನಾಡಿನ ಭಾಗ ಹೆಚ್ಚು ಕಡಿಮೆ ಗೋವಾದಿಂದ ಹಿಡಿದು ಕೂರ್ಗಿನ ವರೆಗೂ ವಿಸ್ತರಿಸಿದೆ. ಇದಿಷ್ಟು ಪ್ರದೇಶವೂ ೧೭೬೨ರ ವರೆಗೂ ಒಂದೇ ಆಡಳಿತದಲ್ಲಿತ್ತು. ಆದರೆ ಟಿಪ್ಪೂ ಸುಲ್ತಾನನ ನಂತರ ಇದು ಒಡೆದು ಛಿದ್ರ ವಿಛಿದ್ರವಾಗಿ ಅನೇಕ ರಾಜ್ಯಗಳಲ್ಲಿ ಸೇರಿಹೋಯಿತು. ಆದರೆ ಇತ್ತೀಚೆಗೆ ಕರ್ನಾಟಕ ರಾಜ್ಯ ಸ್ಥಾಪನೆಯಾದ ಮೇಲೆ ಗೋವಾ ಒಂದು ಹೊರತಾಗಿ ಇನ್ನುಳಿದೆಲ್ಲಾ ಹಿಂದಿನ ಮಲೆನಾಡು ಪ್ರದೇಶವೂ ಈಗ ಕರ್ನಾಟಕದಲ್ಲಿ ಸೇರಿ ಮತ್ತೆ ಒಂದಾಗಿದೆ. ಇದನ್ನು ಆ ರಾಜ್ಯಗಳ ಪುನರ್ವಿಂಗಡಣೆಯ ಸಮಿತಿಯವರು ತಮ್ಮ ಗಮನದಲ್ಲಿಟ್ಟುಕೊಂಡು ಈ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ವಿಶೇಷವಾಗಿ ಈ ಕರ್ನಾಟಕ ರಾಜ್ಯ ಸ್ಥಾಪನೆಯ ಹಿನ್ನೆಲೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಭಾಗಕ್ಕೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಅವರು ಪ್ರಸ್ತಾಪಮಾಡಿದ್ದಾರೆ.

(MR. DEPUTY SPEAKER in the Chair)

12-30 P. M.

ಈ ಹಿನ್ನೆಲೆಯಲ್ಲಿ ನೋಡಿದರೆ ಮಲೆನಾಡು ಒಂದು ಸಂಪದ್ಭರಿತವಾದ ಪ್ರದೇಶವೆಂದು ಭಾವಿಸಬಹುದು. ಮಲೆನಾಡಿನಲ್ಲಿ ಕೊಡಗು, ದಕ್ಷಿಣ ಕನ್ನಡ, ಶಿವಮೊಗ್ಗ, ಉತ್ತರ ಕನ್ನಡ, ಚಿಕ್ಕ ಮಗಳೂರು ಜಿಲ್ಲೆಗಳು ಮತ್ತು ಧಾರವಾಡ, ಬೆಳಗಾವಿ, ಮೈಸೂರು ಮತ್ತು ಹಾಸನ ಈ ಜಿಲ್ಲೆಗಳ ಕೆಲವು ತಾಲ್ಲೂಕುಗಳು ಸೇರಿವೆ. ಒಟ್ಟು ರಾಜ್ಯದಲ್ಲಿ ಸುಮಾರು ೧೦ ಲಕ್ಷದ ೧೩ ಸಾವಿರ ಹೆಕ್ಟೇರ ಪ್ರದೇಶದಲ್ಲಿ ಭತ್ತ ಬೆಳೆದರೆ ೫ ಲಕ್ಷದ ೧೬ ಸಾವಿರ ಹೆಕ್ಟೇರುಗಳಲ್ಲಿ ಮಲೆನಾಡಿನಲ್ಲಿ ಭತ್ತ ಬೆಳೆಯುವದು. ಅಂದರೆ ಒಟ್ಟು ರಾಜ್ಯದಲ್ಲಿ ಬೆಳೆಯುವ ಭತ್ತದಲ್ಲಿ ಅರ್ಧ ಭಾಗ ಮಲೆನಾಡಿನಲ್ಲಿ ಬೆಳೆಯುವದು. ಒಟ್ಟು ರಾಜ್ಯದಲ್ಲಿ ಸುಮಾರು ೧೫ ಲಕ್ಷ ಟನ್ನ ಅಕ್ಕಿ ಉತ್ಪತ್ತಿಯಾದರೆ ಮಲೆನಾಡು ಪ್ರದೇಶದಲ್ಲಿ ಸುಮಾರು ಅದರ ಅರ್ಧ ಭಾಗ ಉತ್ಪತ್ತಿಯಾಗುವುದು. ಮಲೆನಾಡನ್ನು ಭತ್ತದ ಕಣಜವೆಂದರೆ ಅಶ್ಚರ್ಯವಾಗಲಾರದು. ಆಹಾರ ಪದಾರ್ಥಗಳನ್ನು ಉತ್ಪತ್ತಿ ಮಾಡುವುದರಲ್ಲಿ ನಮ್ಮ ರಾಜ್ಯದಲ್ಲಿ ಮಲೆನಾಡು ಪ್ರಮುಖ ಪಾತ್ರವನ್ನು ವಹಿಸಿದೆ ಈ ದೃಷ್ಟಿಯಿಂದ ಮಲೆನಾಡು ಪ್ರದೇಶವನ್ನು ಅತ್ಯಂತ ಪ್ರಾಮುಖ್ಯವಾದುದೆಂದು ಭಾವಿಸಬೇಕು. ಜೊತೆಗೆ ಅಲ್ಲಿ ಬೇಕಾದಷ್ಟು ಅರಣ್ಯ ಸಂಪತ್ತು ಸಹ ಇದೆ. ಒಟ್ಟು ರಾಜ್ಯದಲ್ಲಿರುವ ಅರಣ್ಯದಿಂದ ೧೯ ಕೋಟಿ ರೂಪಾಯಿಗಳ ಆದಾಯ ಬರುತ್ತಿದ್ದರೆ ಮಲೆನಾಡಿನ ಅರಣ್ಯದಿಂದ ಅದರಲ್ಲಿ ಸೇಕಡ ೯೦ರಷ್ಟು

ಬರುತ್ತಿದೆ. ಮಲೆನಾಡಿನ ಅರಣ್ಯದಿಂದ ಹೆಚ್ಚು ಉತ್ಪತ್ತಿ ಇದೆ. ಈಗ ಮಲೆನಾಡಿನ ಕಾಡುಪ್ರದೇಶ ನಶಿಸಿ ಹೋಗುತ್ತಿದೆ. ಉದಾಹರಣೆಗೆ ಭದ್ರಾವತಿ ಕಾರ್ಖಾನೆಗೆ ಇಗ ಸೌದೆ ಒದಗಿಸುತ್ತಿದ್ದಾರೆ, ಸುಮಾರು ೩ ಲಕ್ಷ ಟನ್ನ ಸೌದೆಯನ್ನು ಇದ್ದಲಿಗಾಗಿ ಒದಗಿಸುತ್ತಿದ್ದಾರೆ. ಇದಕ್ಕಾಗಿ ಸುಮಾರು ೩೦ ಚದರಮೈಲಿ ಕಾಡು ಪ್ರದೇಶವನ್ನು ಪ್ರತಿ ವರ್ಷ ಕಡಿಯಬೇಕು. ಒಂದು ಎಕರೆ ಪ್ರದೇಶದಲ್ಲಿ ಸುಮಾರು ೧೦ ಟನ್ನ ಸೌದೆ ಸಿಕ್ಕಬಹುದು. ಸೌದೆಗಾಗಿ ಕಾಡು ಕಡಿಯುವುದರಿಂದ ಪ್ರತಿ ವರ್ಷ ಸುಮಾರು ೩೦ ಚದರಮೈಲಿ ಅರಣ್ಯ ಹಾಳುಗುತ್ತಿದೆ. ಹೀಗೆ ೨೦ ವರ್ಷ ಮಾಡಿದರೆ ಅರಣ್ಯ ವೆಲ್ಲಾ ನಾಶವಾಗುವ ಸಂದರ್ಭ ಬರುವುದು. ಇದನ್ನು ಗಮನಿಸಿ ಅರಣ್ಯವನ್ನು ವ್ಯಾಪಕವಾಗಿ ಬೆಳೆಸಬೇಕಾದ ಅಗತ್ಯವಿದೆ. ಆದುದರಿಂದ ಮಲೆನಾಡು ಪ್ರದೇಶವನ್ನು ಯಾವರೀತಿ ಅಭಿವೃದ್ಧಿ ಮಾಡಬೇಕು ಎಂಬುದರ ಕಡೆಗೆ ಲಕ್ಷವಿಡಬೇಕು. ಮಲೆ ನಾಡನ್ನು ಹಲವಾರು ಜನರು ಹಲವಾರು ರೀತಿಯಲ್ಲಿ ವರ್ಣಿಸಿದ್ದಾರೆ. ಆ ಪ್ರದೇಶ ದಲ್ಲಿ ಯಾವುದಕ್ಕೂ ಕೂಡ ಕೊರತೆಯಾಗಲಾರದು. ಇಂದು ನಮ್ಮ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೂಡ ಮಲೆನಾಡಿನ ಬಗ್ಗೆ ಹೆಚ್ಚು ವಿಷಯ ತಿಳಿಸಿ ದ್ದಾರೆ. ಇದರ ವೈಶಿಷ್ಟ್ಯವನ್ನು ಗಮನಿಸಿ ತಕ್ಕ ಕ್ರಮ ಅದರ ಬಗ್ಗೆ ಕೈಕೊಳ್ಳಬೇಕು. ಈ ವಿಚಾರವನ್ನು ಪಂಚವಾರ್ಷಿಕ ಯೋಜನೆಯ ಪುಟ ೧೬ರಲ್ಲಿ ನೋಡಬಹುದು. ಅಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಕೊಂಡು ಅರಣ್ಯ ಬೆಳೆಸಿ ರಾಷ್ಟ್ರ ಸಂಪತ್ತನ್ನು ಹೆಚ್ಚಿಸಲು ವಿಶೇಷ ಗಮನ ಕೊಡಬೇಕಾದ್ದು ಅವಶ್ಯಕ. ಇದನ್ನು ಯೋಜನೆಯಲ್ಲಿ ವಿವರಿಸಿದ್ದಾರೆ. ಜೊತೆಗೆ ಮಲೆನಾಡಿನಲ್ಲಿ ಸಣ್ಣ ನೀರಾವರಿ ಕೆರೆಗಳಿಗೆ ಗಮನ ನೀಡಬೇಕಾಗಿದೆ, ೧೪ನೇ ಪುಟದಲ್ಲಿ ಇದರ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ನಮ್ಮ ರಾಜ್ಯವಲ್ಲಿರುವ ಸುಮಾರು ೩೮೮೨ ಮೈನರ ಕೆರೆಗಳ ಪೈಕಿ ಮಲೆನಾಡಿನಲ್ಲಿ ೧೩ ಸಾವಿರ ಕೆರೆಗಳಿವೆ. ಅಂದರೆ ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿರುವ ಸಣ್ಣ ಕೆರೆಗಳಲ್ಲಿ ಮೂರನೆಯ ಒಂದು ಭಾಗದಷ್ಟು ಮಲೆನಾಡಿನಲ್ಲಿವೆ. ಅಂದಮೇಲೆ ಅಲ್ಲಿ ಸಣ್ಣ ನೀರಾವರಿಗೆ ಹೆಚ್ಚು ಗಮನ ಕೊಡಬೇಕಾದ್ದು ಪ್ರಾಮುಖ್ಯವಾಗಿದೆ. ಇದಕ್ಕಾಗಿ ಒಂದು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ರಚಿಸಿ ಅಲ್ಲಿ ವಿಶೇಷ ಅಭಿವೃದ್ಧಿ ಸಾಧಿಸಲು ಸಾಧ್ಯವಿದೆ. ಹಿಂದಿನಿಂದ ಈ ವಿಚಾರವನ್ನು ತಜ್ಞರು ಪ್ರಸ್ತಾಪಿಸಿದ್ದಾರೆ. ರಾಷ್ಟ್ರ ಸರಕಾರ ಅಥವಾ ರಾಜ್ಯ ಸರಕಾರ ಇದರ ಬಗ್ಗೆ ಪ್ರಯತ್ನ ಮಾಡಿದೆ. ದಿವಂಗತ ವಿಶ್ವೇಶ್ವರಯ್ಯನವರ ಕಾಲದಿಂದ ಮಲೆನಾಡಿನ ಅಭಿವೃದ್ಧಿಯ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿದ್ದಾರೆ, ಆಗಲೂ ಕೂಡ ಮಲೆನಾಡಿನ ಅಭಿವೃದ್ಧಿಗೆ ಒಂದು ಮಂಡಲಿಯ ಅಗತ್ಯವಿದೆಯೆಂದು ಹೇಳಿದ್ದರು. ಅದಾದಮೇಲೆ ೧೯೪೫ರಲ್ಲಿ ರಾಮನಾಥನ್ ಸಮಿತಿಯನ್ನು ಹಿಂದಿನ ಸರಕಾರ ನೇಮಕ ಮಾಡಿದ್ದು ಅದರ ವರದಿ ಸಹ ಬಂದಿದೆ. ನಂತರ ಕೇಂದ್ರ ಸರಕಾರ ರಾಮನಾಥನ್ ಮತ್ತು ಮಲ್ಲಾರಾಧ್ಯರು ಇರುವ ಸಮಿತಿ ಮಾಡಿತ್ತು. ಅದು ಪರಿಶೀಲಿಸಿ ಮಲೆನಾಡಿನ ಅಭಿವೃದ್ಧಿಗೆ ಒಂದು ಮಂಡಲಿಯನ್ನು ರಚಿಸುವ ಅವಶ್ಯಕತೆಯ ಬಗ್ಗೆ ಕೇಂದ್ರ ಸರಕಾರಕ್ಕೆ ವರದಿ ಮಾಡಿತು. ಅದೂ ಇದೆ. ಜೊತೆಗೆ ಹಿಂದೆ ಒಂದು ಸಾರಿ ಈ ಸಭೆಯ ಮಾಜಿ

ಅಧ್ಯಕ್ಷರಾಗಿದ್ದ ಶ್ರೀ ವೈಕುಂಠ ಬಾಳಿಗರವರು ಕೂಡ ಇದರ ಬಗ್ಗೆ ಪ್ರಯತ್ನ ಮಾಡಿದ್ದರು.-

ಆ ರೀತಿ ಮಾಡುವಾಗ ಕೇಂದ್ರ ಸರ್ಕಾರದ ಮಂತ್ರಿಗಳೊಡಳ ಪತ್ರವ್ಯವಹಾರ ಮಾಡುತ್ತಾ ಇರುವ ಕಾಲದಲ್ಲಿ ಅಂದಿನ ಪುನರ್ವಸತಿ ಸಚಿವರಾದಂಥ ಶ್ರೀಮಾನ್ ಮಹಾವೀರ ತ್ಯಾಗಿಯವರು ಒಂದು ಪತ್ರವನ್ನು ಬರೆದಿದ್ದರು. ಮಲೆನಾಡಿನ ಬಗ್ಗೆ ಅದರ ಅಭಿವೃದ್ಧಿಯನ್ನು ಮಾಡುವುದಕ್ಕೋಸ್ಕರ ಒಂದು ಸೆಮಿ ಆಟಾನಮಸ್ ಬೋರ್ಡು ರಚನೆ ಮಾಡತಕ್ಕ ಅಗತ್ಯ ಇದೆ, ಆ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇವೆ, ಮತ್ತು ಈ ಬಗ್ಗೆ ಕೇಂದ್ರ ಸರ್ಕಾರ ಕಾತುರವಾಗಿದೆ ಎನ್ನತಕ್ಕ ಮಾತನ್ನು ದಿವಂಗತ ಬಾಳಿಗಾ ಅವರಿಗೆ ಅವರು ತಮ್ಮ ಪತ್ರದಲ್ಲಿ ತಿಳಿಸಿದ್ದಾರೆ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಒಂದು ಸೆಮಿ ಆಟಾನಾಮಸ್ ಬಾಡಿ ಆಗತ್ಯತೆ ಇದೆ, ಅದನ್ನು ತೀವ್ರತೆಯಿಂದ ಪ್ರಾರಂಭ ಮಾಡಬೇಕಾಗಿದೆ ಎನ್ನುವ ಮಾತನ್ನು ೨೦-೧೦-೧೯೬೪ ರಲ್ಲಿ ಸ್ಪಷ್ಟವಾಗಿ ಅಂದಿನ ಮಹಾವೀರ ತ್ಯಾಗಿಯವರು ಸ್ಪಷ್ಟಪಡಿಸಿದ್ದಾರೆ. ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಾನು ಈ ಮಾತನ್ನು ಹೇಳುವಾಗ ಸ್ವಾರ್ಥದ ದೃಷ್ಟಿಯಿಂದ ಹೇಳುತ್ತಿದ್ದೇನೆ ಎಂದು ಬೇರೆಯವರಿಗೆ ಕಲ್ಪನೆ ಬರಬಹುದು. ಆ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿಲ್ಲ; ಮಲೆನಾಡು ಅಭಿವೃದ್ಧಿಯಾಗುವುದರಿಂದ ಬರೀ ಮಲೆನಾಡಿನ ಜನಕ್ಕೆ ಅಷ್ಟೆಅಲ್ಲ, ಇಡೀ ರಾಜ್ಯಕ್ಕೆ ಸಿಕ್ಕಬೇಕಾದಂಥ ಸಂಪನ್ಮೂಲಗಳು ರಾಜ್ಯಕ್ಕೆ ಸೇರಿ ಹೋಗುತ್ತವೆ. ರಾಜ್ಯದ ಅಭಿವೃದ್ಧಿ ಮಲೆನಾಡಿನ ಅಭಿವೃದ್ಧಿಯನ್ನು ಹೊಂದಿಕೊಂಡಿದೆ. ಮೇಲಾಗಿ ಅದಕ್ಕೆ ಬೇರೆ ಪ್ರದೇಶಗಳಿಗೆ ಖರ್ಚು ಮಾಡುತಕ್ಕ ರೀತಿಯಲ್ಲಿ, ಬೇರೆ ಪ್ರದೇಶವನ್ನು ನೋಡತಕ್ಕ ರೀತಿಯಲ್ಲಿ ಮಲೆನಾಡಿನ ಪ್ರದೇಶವನ್ನು ನೋಡಿದರೆ ಆಗುವುದಲ್ಲ. ಅಲ್ಲಿರುವ ವ್ಯವಸ್ಥೆಯನ್ನು ಕಲ್ಪನೆಯಲ್ಲಿಟ್ಟುಕೊಂಡು ಅದಕ್ಕೆ ಪ್ರಾಮುಖ್ಯವಾದ ಕಾರ್ಯಕ್ರಮಗಳನ್ನು ರೂಪಿಸಿದರೆ ಮಾತ್ರ ಮಲೆನಾಡನ್ನು ವೈವಿಧ್ಯಮಯವಾಗಿ ಬೆಳೆಸುವುದಕ್ಕೆ ಸಾಧ್ಯ. ತನ್ಮೂಲಕ ಆಹಾರದ ಕೊರತೆಯನ್ನು ಮಾನುಗಾರಿಕೆ; ಬಂದೆರುಗಳ ಕೊರತೆಯನ್ನು, ರಾಜ್ಯದ ಅರಣ್ಯ ಸಂಪತ್ತಿನ ಕೊರತೆಯನ್ನು ಸಂಪೂರ್ಣವಾಗಿ ನೀಗುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಮಲೆನಾಡನ್ನು ಅಭಿವೃದ್ಧಿ ಪಡಿಸತಕ್ಕದ್ದು ಸಾಧುವಾದ ಮಾತು ಎಂದು ನಾನು ಹೇಳುತ್ತೇನೆ. ಮಲೆನಾಡಿನ ಬಗ್ಗೆ ಹಿಂದಿನ ಪ್ರಮುಖರು ಹಾಡಿ ಹೊಗಳಿದಂಥಾದ್ದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಅನೇಕ ಪರದೇಶಿಯವರು ರಾಜ್ಯಕ್ಕೆ ಭೇಟಿ ಕೊಟ್ಟಾಗ ಅವರು ಆನಂದಭರಿತರಾಗಿ ಮಲೆನಾಡನ್ನು ಹಾಡಿ ಹೊಗಳಿದ್ದಾರೆ. ಪರದೇಶದ ಲಿಯರ್ ಮರಿತ್ ಎನ್ನುವರು ಹೊಗಳಿರುವುದನ್ನು ಈ ಸಭೆಯ ಗಮನಕ್ಕೆ ತಂದರೆ ಅದು ಅತಿಶಯೋಕ್ತಿಯಾಗಲಾರದು. ಮಾನ್ಯ ಅಧ್ಯಕ್ಷರ ಅಪ್ಪಣೆಯನ್ನು ಪಡೆದು ಕೆಲವು ವಾಕ್ಯಗಳನ್ನು ಓದುವುದಕ್ಕೆ ಇಷ್ಟಪಡುತ್ತೇನೆ.

"ಮೈಸೂರಿನ ಪ್ರದೇಶದಲ್ಲೆಲ್ಲಾ, ಗ್ರಾಮಾಂತರದ ಸ್ಪಷ್ಟವಾದ ರೂಪರೇಕೆಗಳನ್ನು ಮಲೆನಾಡಿನಂತೆ ಬೇರೆ ಯಾವ ಪ್ರದೇಶವೂ ಒದಗಿಸಲಾರದು. ಬಳಸಿ

ಬಳಸಿ ಸಿಕ್ಕುವ ಕೊಳ್ಳ, ಇಳಿಜಾರಾದ ನೆಲ, ಗುಡ್ಡ ಬೆಟ್ಟದ ತಳದಲ್ಲಿ ಮೆಟ್ಟಲು ಮೆಟ್ಟಲಾಗಿ ಲಕ್ಷ್ಯವಹಿಸಿ ಬೆಳಸಿದ ಪಚ್ಚೆ ಪೈರು, ಪ್ರಾಣಿಗಳನ್ನು ಉಳಿಸುವುದಕ್ಕಾಗಿ ಕಾಡಿನ ಕೊಂಚ ದೂರದಲ್ಲಿ ಹೊಟ್ಟದ ಹುಲ್ಲು ಬಣವೆ, ಅದರ ಸುತ್ತ ಎತ್ತರದ ಬೇಲಿ, ಹಾಗೆ ಬೇಲಿಯ ಕಡೆಗಳಿಂದ ಬೀಸಿದ ಬಿಸಿಲಿನಲ್ಲಿ ರಂಬೆ ತರಗೆಲೆಗಳ ಮರೆಯೊಸರೆಯಲ್ಲಿ ಬೆಳೆಸಿದ ಏಲಕ್ಕಿ ಸಸಿಗಳು, ಗದ್ದೆಗಳಿಂದ ಸುತ್ತುವರಿದ ಮರ ಪೊದೆಗಳು, ತೆರಿಮರೆಯಿಂದ ಅಣಕಿ ಹಾಕುವ ಕೆಂಪು ಹಂಚಿನ ರೇಕ ಕಡಿದಾಗಿಳಿವ ಮಾಡಿನ ಮನೆ, ಸಣ್ಣ ಅಂಗಳದ ಮುಗಿಲಿನಲ್ಲಿ ದನಕರುಗಳತೊಟ್ಟಿಗೆ, ಇನ್ನೊಂದೆಡೆ ಧಾನ್ಯದ ಕಣಜ, ಮತ್ತೊಂದೆಡೆ ನೋಡಬೇಕೆಂದರೆ, ಕೊಳದ ಕಬ್ಬದಿಗಳಲ್ಲಿ ಗುಡ್ಡ ದಾರಿಗಳಲ್ಲಿ ಸಾಲುಗಟ್ಟಿದ ಕಿತ್ತಳೆ, ಕಾಫಿ ತೋಟಗಳು, ಹಳ್ಳಗಳ ಬಳಿ ವೀಳ್ಯದೆಲೆ ಮತ್ತು ಕರಿಮೆಣಸಿನ ಬಳ್ಳಿಗಳು, ಅವನ್ನು ಸುತ್ತಿರುವುದು ಕಡಿದಾದ ಗುಡ್ಡದೋರೆಗಳಲ್ಲಿ ಮೇಯ್ದು ಕೆಲವು ಹುಲ್ಲುಗಾವಲು, ಇನ್ನು ಕೆಲವು ಹುಲ್ಲು ಬೆಳೆದ ಪ್ರದೇಶಗಳು, ಗುಡ್ಡದ ಪೊದೆಯಲ್ಲಿ ಇವೆಲ್ಲಕ್ಕೂ ಹಿನ್ನೆಲೆಯ ನೇಪತ್ಯ ವಸ್ತ್ರವಾಗಿ ಸಸ್ಯ ಶ್ಯಾಮಲ ಶೃಂಗಾರಗಳು, ಅನತಿ ದೂರದಲ್ಲಿ ಮರೆಯಾಗುವುದನ್ನು ಕಾಣಬಹುದು. ಇದು ಅವರು ಬಣ್ಣಿಸಿರುವ ಮಲೆನಾಡಿನ ಸೃಷ್ಟಿ, ಸೌಂದರ್ಯ ಹಾಗೆಯೇ ನಮ್ಮ ಸರ್ವಜ್ಞ ಹೇಳಿದ ಮಾತನ್ನೂ ಇಲ್ಲಿ ನಾವು ಹೇಳಬಹುದು. "ಅಲ್ಲಿ ಅರಿಶಿನವುಂಟು, ಬೆಲ್ಲ ಬೆಳೆಯದೆವುಂಟು, ಮೆಲ್ಲಲಿಕೆ ಹಲಸು ಮಾವುಂಟು, ಮಲೆನಾಡ ಅಲ್ಲೆನ್ನಬಹುದಿ ಸರ್ವಜ್ಞ....'

ಶ್ರೀ ಕೆ. ಎಚ್. ಪಾಟೀಲ್.— ಹಣ ಉಂಟು ಎಂದು ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.— ಮಲೆನಾಡಿನಲ್ಲಿ ಹಣವುಂಟು, ಹೆಚ್ಚಾಗಿ ಬೆಳೆದಾಗ ಹಣವುಂಟು ಅದನ್ನು ಕಡಿಯುವುದಕ್ಕೆ ಪ್ರಾರಂಭ ಮಾಡಿದಿರಿ. ತಾವು ಇದನ್ನು ಹರಾಜು ಹಾಕುತ್ತಿದ್ದೀರಿ, ಯಾವ ನೆಲದಲ್ಲಿ, ಯಾವ ಜಿಲ್ಲೆಯಲ್ಲಿ ಸಂಪತ್ತನ್ನು ಇಷ್ಟು ಸುಲಭವಾಗಿ ಸೃಷ್ಟಿ ಮಾಡುವುದಕ್ಕೆ ಸಾಧ್ಯವಿದೆ? ಮಲೆನಾಡಿನಲ್ಲಿ ಮಾತ್ರ ಇದು ಸಾಧ್ಯವಿದೆ. ಮೆಲೆನಾಡಿನ ಶಿವಮೊಗ್ಗದಲ್ಲಿ ಒಂದು ವಿದ್ಯಾಪೀಠ ಇದೆ, ಅಲ್ಲಿ ಪ್ಲಿಂಕ್ಲರ್ ಇರಿಗೇಷನ್ ಮಾಡಿದ್ದಾರೆ, ಕೇವಲ ಎಕರೆ ಒಂದಕ್ಕೆ ಐದುನೂರು ರೂಪಾಯಿಗಳನ್ನು ಖರ್ಚುಮಾಡಿ, ಎರಡು ಉತ್ತಮವಾದ ಫಸಲನ್ನು ತೆಗೆದಿದ್ದಾರೆ. ಮಲೆನಾಡಿನಲ್ಲಿರತಕ್ಕ ಹಳ್ಳ ಕೊಳ್ಳದ ನೀರನ್ನು ಪ್ಲಿಂಕ್ಲರ್ ಇರಿಗೇಷನ್ ಮಾಡಿದರೆ ಉತ್ತಮ ನೀರಾವರಿಯಾಗುತ್ತದೆ. ಸಂಪತ್ತನ್ನು ಉಪಯೋಗಮಾಡಿಕೊಳ್ಳತಕ್ಕ ಜಾಣತನ ರಾಜ್ಯಕ್ಕೆ ಬರಬೇಕಾಗಿದೆ ಆ ರೀತಿ ಜಾಣತನ ಬಂದರೆ, ಅದನ್ನು ಅತ್ಯಂತ ಸುಂದರವಾದ ಪ್ರದೇಶವನ್ನಾಗಿ ಮಾಡಬಹುದು; ಮತ್ತು ಸ್ವಿಟ್ಜರ್ಲೆಂಡ್ ರೀತಿಯಲ್ಲಿ ಇದನ್ನು ಬೆಳೆಸುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ಹೇಳಬೇಕು ಎಂದರೆ, ಬಿದನೂರು ಸಂಸ್ಥಾನದ ಕಾಲದಲ್ಲಿ, ಅಲ್ಲಿ ಕಬ್ಬಿಣ ತಯಾರು ಮಾಡತಕ್ಕ ಫೌಂಡರಿ ಹೇರಳವಾಗಿತ್ತು, ಅತ್ಯಂತ ಉತ್ತಮವಾದ ಕಬ್ಬಿಣದ ಅದರು ಅಲ್ಲಿ ತಯಾರು ಮಾಡಿದಂಥ ಸಾಮಾನುಗಳು ತುಕ್ಕುಹಿಡಿಯುವುದಿಲ್ಲ. ಆದ್ದರಿಂದ ಇಂಥ

ಒಂದು ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ಸಹಾಯಕವಾಗಬೇಕು. ರಾಜ್ಯ ಪುನರ್ವಿಂಗಡಿಯಾದಾಗ, ಹರಿದುಹಂಚಿಹೋದ ಕನ್ನಡ ರಾಜ್ಯದ ಭಾಗಗಳನ್ನು ಸೇರಿಸಿ ಕರ್ನಾಟಕ ಎಂದು ವ್ಯಾಖ್ಯಾನವನ್ನು ಕೊಟ್ಟಿದ್ದೀರಿ. ಕರ್ನಾಟಕ ಬೆಳೆಸುವುದರಲ್ಲಿ ಮಲೆನಾಡಿನ ಅಭಿವೃದ್ಧಿಯನ್ನು ಮಾಡತಕ್ಕದ್ದು ಸರ್ಕಾರದ ಕರ್ತವ್ಯವಾಗಿದೆ, ಎನ್ನುವ ದೂರದೃಷ್ಟಿಯನ್ನು ತಾವು ಗಮನದಲ್ಲಿಟ್ಟುಕೊಂಡು ಇದನ್ನು ಅಭಿವೃದ್ಧಿಪಡಿಸುವುದಕ್ಕೆ ರಾಜ್ಯಸರ್ಕಾರ ಸಹಾಯ ಮಾಡಬೇಕಾಗಿದೆ. ಇದನ್ನು ಮಾಡಬೇಕಾದರೆ, ಹಾಗೆಯೇ ಆಗುವುದಿಲ್ಲ, ಯೋಜನೆಗಳು ಇವೆ ಎಂದು ಏತಕ್ಕೆ ವಿಶೇಷ ಬೋರ್ಡು ಎಂದು ತಾವು ಕೇಳಬಹುದು. ಇದನ್ನು ಒಳ್ಳೆಯ ದೃಷ್ಟಿಕೋನದಿಂದ ನೋಡಿ, ವಿಚಾರಮಾಡಿ, ಆಲೋಚನೆ ಮಾಡಿ ಇದರ ಬಗ್ಗೆ ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಹಾಗೆ ಮಾಡುವುದರಿಂದ ಇದನ್ನು ಬೆಳೆಸುವುದಕ್ಕಾಗುತ್ತದೆ. ಇದರ ಅಗತ್ಯತೆಯನ್ನು ಹಿಂದೆ ಕಂಡು ಒಂದು ಮಂಡಲಿಯನ್ನು ರಚನೆಮಾಡಿ ಅದು ಸರಿಯಾಗಿ ಕೆಲಸ ಮಾಡಲಿಲ್ಲ. ಹಣಕಾಸಿನ ಕೊರತೆಯಿಂದಾಗಿ ಅದು ಸರಿಯಾಗಿ ಕೆಲಸ ಮಾಡಲಿಲ್ಲ. ಈ ಬಗ್ಗೆ ಈಗ ಮಂಡಲಿಯನ್ನು ರಚನೆಮಾಡಿದರೆ ಆಸಕ್ತಿವಹಿಸಿ ಸರ್ವ ವ್ಯಾಪಕ ವಾದಂಥ ಯೋಜನೆಯನ್ನು ಸಿದ್ಧಪಡಿಸಿ, ತನ್ಮೂಲಕ ಹಣವನ್ನು ಒದಗಿಸಿಕೊಂಡು ಕೆಲಸಮಾಡಿದರೆ ಆ ಭಾಗದ ನೆಲವನ್ನು ಅಭಿವೃದ್ಧಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಈ ಎಲ್ಲಾ ಹಿನ್ನೆಲೆಯನ್ನು ತಾವು ಗಮನದಲ್ಲಿಟ್ಟುಕೊಂಡು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಸ್ಥಾಪನೆ ಮಾಡಲಿಕ್ಕೆ ಸರ್ಕಾರ ಒಪ್ಪಬೇಕು ಎಂದು ಹೇಳಿ ಇದಕ್ಕೆ ಎಲ್ಲಾ ಸದಸ್ಯರ ಅನುಮೋದನೆಯನ್ನು ಕೇಳಿಕೊಂಡು ಅಧ್ಯಕ್ಷರಿಗೆ ಹೃತ್ಪೂರ್ವಕವಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಡು (ಶಾಂತಿನಗರ):— ಸನ್ಮಾನ್ಯ ಅಧ್ಯಕ್ಷರೆ, ಕೋಣಂದೂರು ಲಿಂಗಪ್ಪನವರು ಯಾವ ನಿರ್ಣಯವನ್ನು ತಂದಿದ್ದಾರೆ ಅದನ್ನು ಸರ್ವಾನುಮತದಿಂದ ಅನುಮೋದಿಸುತ್ತೇನೆ. ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನು ಹೇಳಬೇಕೆಂದು ಬಯಸುತ್ತೇನೆ.

ಇದುವರೆಗೂ ನನ್ನ ಮಿತ್ರರು ಹೇಳಿದ ಹಾಗೆ ಮಲೆನಾಡಿನ ಬಗ್ಗೆ ಕವಿಗಳು, ರಾಜಕಾರಣಿಗಳು, ಅವರದೇ ಆದ ಶೈಲಿಯಲ್ಲಿ ಭಾಷೆಯಲ್ಲಿ ಕೆಲವು ವಿಷಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಅದರಲ್ಲೂ ರಾಷ್ಟ್ರಕವಿ ಹಾಗೂ ಮಲೆನಾಡಿನ ಕೋಗಿಲೆ, ಕುವೆಂಪು ಅದರ ಬಗ್ಗೆ ಬೇಕಾದಷ್ಟು ಹೇಳಿದ್ದಾರೆ. ನಮ್ಮ ಮೈಸೂರು ಸಂಸ್ಥಾನದಲ್ಲಿ ಎರಡು ಭಾಗವಿದೆ. ಒಂದು ಮಲೆನಾಡು ಭಾಗ, ಮತ್ತೊಂದು ಮೈದಾನ ಭಾಗ. ಕಾರಣಾಂತರದಿಂದ ಮಲೆನಾಡಿನ ಪ್ರದೇಶ ಏನು ಇದೆ ಅಲ್ಲಿ ಖನಿಜ ಸಂಪತ್ತು ಇದೆ ಸೃಷ್ಟಿ ಇದೆ. ೫ ಜಿಲ್ಲೆಗಳಲ್ಲಿ ಒಂದೊಂದು ಜಿಲ್ಲೆ ಒಂದೊಂದು ವಿಧದಲ್ಲಿ ಪ್ರಾಮುಖ್ಯತೆ ಇದೆ. ಶಿವಮೊಗ್ಗ ಜಿಲ್ಲೆ ತೆಗೆದುಕೊಂಡರೆ ಅಲ್ಲಿ ಬೇಕಾದಷ್ಟು ಕಾಡು ಇದೆ, ಜೋಗ ಫಾಲ್ಸ ಇದೆ. ಚಿಕ್ಕಮಗಳೂರು ಜಿಲ್ಲೆ ತೆಗೆದುಕೊಂಡರೆ ಅಲ್ಲಿ ಕಾಫಿ ಬೆಳೆಸಿ ಫಾರಿನ್ ಎಕ್ಸ್‌ಚೇಂಜ ಕೊಡುತ್ತಿದ್ದಾರೆ. ಅದೇ ರೀತಿ ಕೊಡಗು ಜಿಲ್ಲೆ ಆರೇಂಜ ಮತ್ತು ಏಲಕ್ಕಿ

ಕೊಡುತ್ತದೆ. ಈ ರೀತಿ ೫ ಜಿಲ್ಲೆಗಳೂ ಸಹ ಬೇರೆ ಜಿಲ್ಲೆಗಳಿಗೆ ಸಹಾಯ ಮಾಡ ತಕ್ಕಂಥ ಜಿಲ್ಲೆಗಳಾಗಿವೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ವೈಟ್ ರೆವಲ್ಯೂಷನ್‌ಗೆ ಕಾರಣರಾದ ಡಾ. ಸರ್ ಎಂ. ವಿಶ್ವೇಶ್ವರಯ್ಯನವರು ಜೋಗಫಾಲ್ಸ್ ನಲ್ಲಿ ಕರೆಂಟು ಉತ್ಪಾದನೆ ಮಾಡಿಸಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ ಮಾಡಿದರು ಎಂಬುದನ್ನು ಮರೆಯಬಾರದು. ಮಲೆನಾಡಿನಲ್ಲಿ ಎಲ್ಲಾ ಬರೀ ಕಾಡು ಇರುತ್ತದೆ. ಅಲ್ಲಿ ಬಹಳ ಪ್ರಾಕ್ಟಿಕಲ್ ಡಿಫಿಕಲ್ಟಿಸ್ ಇವೆ. ಅದು ಬ್ಯಾಕವರ್ಡ ಆಗುವುದಕ್ಕೆ ಇದೇ ಕಾರಣ. ಕಾಡು ಜನ, ಹಳ್ಳಿಯ ಜನ ಎಂದು ಅನೇಕ ಸಂದರ್ಭದಲ್ಲಿ ಹೇಳುತ್ತಾರೆ.

ಉಪಾಧ್ಯಕ್ಷರು.—ಮಲೆನಾಡು ಹಾಗೆ ಇಲ್ಲದಿದ್ದರೆ ಸೀನಿಕ್ ಬ್ಯೂಟಿ ಬರುತ್ತಿರ ಲಿಲ್ಲ ಟೊಪೋಗ್ರಫಿ ಇರುವುದೇ ಹಾಗೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು.— ಇದು ನೀವು ಮಾಡಿದ್ದು ಅಲ್ಲ. ಈ ಜಿಲ್ಲೆಗಳು ಬಹಳ ಹಿಂದುಳಿದಿವೆ. ಈಗ ನವೀನ ಕಾಲದಲ್ಲಿ ಮಾಡರ್ನ ಟ್ರಾನ್ಸ್ ಪೋರ್ಟ ಮತ್ತು ಕಮ್ಯುನಿಕೇಶನ್ ಆ ಭಾಗದಲ್ಲಿ ಸ್ವಲ್ಪ ಕಡಿಮೆ ಇದೆ. ಅದಕ್ಕೆ ಕಾರಣ ಗೊತ್ತಿದೆ. ಕೊಡಗಿಗೆ ಹೋದರೆ ಅದು ಚನ್ನಾಗಿ ಅರ್ಥವಾಗುತ್ತದೆ. ಕೊಡಗಿನಲ್ಲಿ ಒಂದೊಂದು ಕಡೆ ೨–೩–೪ ಮನೆಗಳು ಮಾತ್ರ ಇರುತ್ತವೆ. ಅಲ್ಲಿ ರಸ್ತೆ ಆಗಬೇಕಾದರೆ ಸಾವಿರಾರು ಲಕ್ಷ ಗಟ್ಟಲೆ ರೂಪಾಯಿ ಖರ್ಚಾಗುತ್ತದೆ. ಮಲೆನಾಡು ಏರಿಯಾದಲ್ಲಿ ಇಂಡಸ್ಟ್ರೀಸ್ ಡೆವಲಪ್‌ಮೆಂಟ ಆಗಿಲ್ಲ. ಕುದುರೆ ಮುಖದಲ್ಲಿ ಬೇಕಾದಷ್ಟು ಖನಿಜ ಸಂಪತ್ತು ಇದೆ. ಮಲ್ಪೆ ಬಂದರು ಇದೆ. ಅಷ್ಟೆಲ್ಲಾ ಇದ್ದರೂ ಸಹ ಅಲ್ಲಿ ಡೆವಲಪ್‌ಮೆಂಟ ಆಗಿಲ್ಲ. ಕಾರಣ ಆರ್ಥಿಕ ಪರಿಸ್ಥಿತಿ ಸುಧಾರಿಸಿಲ್ಲ. ಅಲ್ಲಿ ಕಾಡು ಕಡಿದು ಜೀವನ ಮಾಡತಕ್ಕ ಜನ ಇದ್ದಾರೆ. ಕಾಫಿ, ಏಲಕ್ಕಿ ಬೆಳೆದು ಫಾರಿನ್ ಎಕ್ಸ್‌ಚೇಂಜ ಪಡೆಯತಕ್ಕ ಜನ ಇದ್ದಾರೆ. ಮಲೆನಾಡು ಡೆವಲಪ್‌ಮೆಂಟ ಬೋರ್ಡ ಆಗತಕ್ಕದ್ದು ಅಗತ್ಯವಿದೆ ಎಂದು ಮೊನ್ನೆ ತಾನೇ ಪ್ಲಾನಿಂಗ ಮಿನಿಸ್ಟರರವರು ಹೇಳುತ್ತಾ ಇದ್ದರು. "We have to plan with the people" ಎಂದು ದಿಲ್ಲಿಯಲ್ಲಿ ಕೆಲವು ಎಕ್ಸಪರ್ಟ್ಸ ಮಾಡತಕ್ಕ ಪ್ಲಾನಿಗೆ ಬದಲಾಗಿ ನಮ್ಮ ಜನಕ್ಕೆ, ಅವರ ಪುರೋಭಿವೃದ್ಧಿಗೆ ಯಾವುದು ಆಗಬೇಕು ಎಂದು ಅನುಭವದಿಂದ ನೋಡಿ ಮಾಡಬೇಕು.

ಚಿನ್ನದ ನಾಡು ಮೈಸೂರು, ಗಂಧದ ಗುಡಿ ಮೈಸೂರು ಎಂದು ಹೇಳುತ್ತಾರೆ. ಗುಡಿಗಾರರು ಮಾಡತಕ್ಕ ಕೆಲಸ ಬಹಳ ಅಚ್ಚುಕಟ್ಟಾಗಿದೆ ಖನಿಜ ಸಂಪತ್ತನ್ನು ಭೂಗರ್ಭದಿಂದ ತೆಗೆದು ಅಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು. 'Industrialise or perish.' ಎಂದು ಏನು ದಿವಂಗತ ವಿಶ್ವೇಶ್ವರಯ್ಯನವರು ಹೇಳುತ್ತಿದ್ದರು. ಅದನ್ನು ಅನುಷ್ಠಾನಕ್ಕೆ ತರಬೇಕಾದರೆ ಮಲೆನಾಡು ಅಭಿವೃದ್ಧಿ

ಮಾಡಬೇಕು. ಡೀಸೆಂಟ್ರಲೈಜೇಷನ್ ಆಫ್ ಇಂಡಸ್ಟ್ರೀಸ್ ಆಗಬೇಕು. ರಸ್ತೆ ಸ್ಥಾರಿಗೆ ಆಗಬೇಕು, ಮಲೆನಾಡು ಯೂನಿವರ್ಸಿಟಿ ಆಗಬೇಕು, ಮೈದಾನ ಪ್ರದೇಶ ದಲ್ಲಿ ಅನುಕೂಲತೆಗಳು ಏನು ಇವೆ ಅವು ಎಲ್ಲಾ ಆಲ್ಲಿ ಆಗಬೇಕು ಎಂದು ನನ್ನ ಸಲಹೆ. ನಾನು ಕೂಡ ಒಂದು ಸಜ್ಯೂಲ್ಯೂಷನ್ ತಂದಿದ್ದೇನೆ ಮಲೆನಾಡು ಡೆವಲಪ್‌ಮೆಂಟ ಬೋರ್ಡ ಹೇಗೆ ಆಗಬೇಕೋ ಅದೇ ರೀತಿ ಬಯಲು ಸೀಮೆ ಡೆವಲಪ್‌ಮೆಂಟ ಬೋರ್ಡ ಆಗಬೇಕು ಎಂದು.

Mr. DEPUTY SPEAKER.—It is out side the scope. The hon. member has to limit himself otherwise his time will be over.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು.—ಮಲೆನಾಡು ಏರಿಯಾ ಡೆವಲಪ್ ಮಾಡುವುದು ಸರ್ಕಾರದವರ ಆದ್ಯ ಕರ್ತವ್ಯ. ನಮ್ಮ ಅಣ್ಣ ತಮ್ಮಂದಿರು ರೇಸಿನಲ್ಲಿ ಒಬ್ಬರು ಹಿಂದೆ ಒಬ್ಬರು ಮುಂದೆ ಇರಬಾರದು. ಎಲ್ಲರೂ ಸಮವಾಗಿ ಇರಬೇಕು. ಆರ್ಥಿಕವಾಗಿ ಮತ್ತು ನೈತಿಕವಾಗಿ ಮಲೆನಾಡು ಅನ್‌ಡೆವಲಪ್ಡ ಏರಿಯಾ ಇದೆ. ಈ ಬ್ಯಾಕವರ್ಡ ಏರಿಯಾ ಡೆವಲಪ್ ಮಾಡಬೇಕಾದರೆ ಪ್ಲಾನಿಂಗ ಕಮಿಶನ್ ಮಾಡ ಬೇಕು. ನನ್ನ ಮಿತ್ರರು ಹೇಳಿದಂತೆ ಆ ಏರಿಯಾದಲ್ಲಿರತಕ್ಕ ಕೆಲವು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಿದರೆ ಮಲೆನಾಡು ಅಭಿವೃದ್ಧಿ ಆಗುವುದಕ್ಕೆ ಸಹಾಯ ವಾಗುತ್ತದೆ. ಆಗ ಕವಿಗಳು ರಾಜಕಾರಣಿಗಳು ಈ ಮಲೆನಾಡಿನ ಯಾವ ರೀತಿ ದೊಡ್ಡ ಆಶಯವನ್ನು ಇಟ್ಟುಕೊಂಡಿದ್ದಾರೆ ಅವರ ಕನಸು ನನಸಾಗುತ್ತದೆ. ಆದುದ ರಿಂದ ಮಲೆನಾಡು ಡೆವಲಪ್‌ಮೆಂಟ ಬೋರ್ಡ ಆಗತಕ್ಕದ್ದು ಸಹಜ. ಸರ್ಕಾರದವರು ಅವರ ಸಲಹೆಗಳನ್ನು ಕಾರ್ಯರೂಪಕ್ಕೆ ತಂದು ಆ ಭಾಗವನ್ನು ಡೆವಲಪ್ ಮಾಡಿ ಬೇಕು. ಈ ನಿರ್ಣಯವನ್ನು ಎಲ್ಲರೂ ಸರ್ವಾನುಮತದಿಂದ ಒಪ್ಪಬೇಕೆಂದು ಹೇ ಆಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The time allotted for the resolution is over. I will extend it for a little while.

†ಶ್ರೀ ಕೋಣಂದೂರು ಲಿಂಗಪ್ಪ.—ನಾನ್ಯ ಅಧ್ಯಕ್ಷರೇ ನನ್ನ ಮಾನ್ಯ ಗೆಳೆಯ ರಾದಂಥ ಶ್ರೀಮಾನ ಕಾಗೋಡು ತಿಮ್ಮಪ್ಪನವರು ಮಲೆನಾಡು ಅಭಿವೃದ್ಧಿ ಮಂಡಳಿಯ ಬಗ್ಗೆ ಏನು ವಾದವನ್ನು ಮಂಡನೆ ಮಾಡಿದ್ದಾರೆ. ಆ ವಾದವನ್ನು ಪುಷ್ಟೀಕರಿಸಿ ನಾನು ಕೆಲವು ಮಾತುಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ.

ಉಪಾಧ್ಯಕ್ಷರು.—ಮುಂದಿನ ಸಾರಿ ಈ ನಿರ್ಣಯವನ್ನು ಚರ್ಚೆಗೆ ತೆಗೆದು ಕೊಳ್ಳೋಣ. The time allotted to this resolution is over. I will adjourn the House. The House stands adjourned to meet on Monday at 1 P.M.

[The House adjourned at Fifty Eight Minutes past Twelve of the Clock to meet again at One of the Clock on Monday, the 21st May 1973.]

KSA LIBRARY, B'lore
B004903
328.32402 548 LAD,1973
JJ40

Karnataka State Archives
(Departmental Library)
4903

WD 476—GBPD—550—29-3-74